Private Agencies for assisting the Special Officer for Fuel Supply to the City of Bangalore.

*Q.—14. Sri S. KARIAPPA (Bangalore District—General).—

Will the Government be pleased to state:—

(*a*) whether there are any private agencies to assist the Special Officer for Fuel Supply to the City of Bangalore;

(*b*) the names of those agencies;

(*c*) the nature of their assistance?

*A.—Sri T. MARIAPPA (Home Minister).—

(*a*), (*b*) and (*c*) A contract has been entered into for one year from 1st January 1950 with Messrs. The Mysore National Contractors and Suppliers Company, for the supply of fuel to Bangalore and in accordance with this contract, the Company are supplying fuel to Bangalore.

ಶ್ರೀ ಎಸ್. ಕರಿಯಪ್ಪನವರು.—ಮೈಸೂರು ನ್ಯಾಷನಲ್ ಕಂಟ್ರಾಕ್ಟರ್ಸ್ ಅಂಡ್ ಸಪ್ಲೈಯರ್ಸ್ ಕಂಪೆನಿಯು ಎಷ್ಟು ದಿವಸಗಳಿಂದ ಕೆಲಸ ಮಾಡಿಕೊಂಡು ಬಂದಿದೆ?

ಶ್ರೀ ಟಿ. ಮರಿಯಪ್ಪನವರು.—ಅದನ್ನು ನಾನು ಹೇಳುವುದಕ್ಕೆ ಆಗುವುದಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಇವರಿಗೆ ಯಾವ ರೀತಿಯಲ್ಲಿ ತಾವು ಕಾಂಟ್ರಾಕ್ಟನ್ನು ಕೊಡಲಾಯಿತು?

ಶ್ರೀ ಟಿ. ಮರಿಯಪ್ಪನವರು.—ಟೆಂಡರ್ಸ್ ಕಾಲ್ ಫಾರ್ ಮಾಡಿ, ಇವರಿಗೆ ದಕ್ಷತೆ ಇದೆಯೆಂಬುದು ಕಂಡು ಬಂದುದರಿಂದ, ಅವರಿಗೆ ಕೊಡಲಾಯಿತು.

ಶ್ರೀ ಎಸ್. ಕರಿಯಪ್ಪನವರು.—ಈ ಕಂಪೆನಿಯ ಥೇರ್ಮನ್ನರು ಯಾರು?

ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

ಶ್ರೀ ಎಸ್. ಕರಿಯಪ್ಪನವರು.—ಈ ಕಂಪೆನಿಯು ಪ್ರಾರಂಭವಾಗಿ ಎಷ್ಟು ದಿವಸಗಳಾಯಿತು, ಇದರಲ್ಲಿ ಎಷ್ಟು ಜನ ನದನ್ಯರಿದ್ದಾರೆ ಇತ್ಯಾದಿ ತಪಶೀಲುಗಳನ್ನು ತಿಳಿಸುವಿರಾ?

ಶ್ರೀ ಟಿ. ಮರಿಯಪ್ಪನವರು.—ಆ ತಪಶೀಲುಗಳು ನನಗೆ ಗೊತ್ತಿಲ್ಲ.

ಶ್ರೀ ಎಸ್. ಕರಿಯಪ್ಪನವರು.—ಅವರು ಸೌದೆಯನ್ನು ಈಗ ಯಾವ ದರದಮೇರೆ ಸರಬರಾಯಿ ಮಾಡುತ್ತಿದ್ದಾರೆ.

ಶ್ರೀ ಟಿ. ಮರಿಯಪ್ಪನವರು.—ಒಂದನೆಯ ತರಗತಿಗೆ—ಸರ್ವೆ, ಕಮರ, ದಿಂಡಿಗ, ಜಾಲಾರಿ—ಈ ಜಾತಿಗಳು ಸೇರಿವೆ. ಎರಡನೆಯ ತರಗತಿಗೆ—ಇತರೆ ಕಾಡು ಜಾತಿಯ ಮರಗಳು ಸೇರಿವೆ.

ಶ್ರೀ ಎಸ್. ಕರಿಯಪ್ಪನವರು.—ಯಾವ ಯಾವ ದನ್ನು ಯಾವ ದರದಲ್ಲಿ ನಿಮಗೆ ಸರಬರಾಯಿ ಮಾಡುತ್ತಾರೆ?

ಶ್ರೀ ಟಿ. ಮರಿಯಪ್ಪನವರು.—ನಾವು ಅವರಿಗೆ ಒಂದನೆಯ ದರ್ಜೆಯದಕ್ಕೆ ಟಿಕ ಒಂದಕ್ಕೆ ರೂ. 32—8—0 ಕೊಡುತ್ತಿದ್ದೇವೆ. ಎರಡನೆಯ ದರ್ಜೆಯ ಸೌದೆಗೆ ಟಿಕ ಒಂದಕ್ಕೆ ರೂ. 24—8—0 ಕೊಡುತ್ತಿದ್ದೇವೆ. ಈ ಕಂಪೆನಿಯವರು ತಾವು ಕೊಳ್ಳುವಾಗ ರೈತರಿಗೆ ಟಿಕ ಒಂದಕ್ಕೆ ಎರಡನೆಯ ದರ್ಜೆಯ ಸೌದೆಗೆ 8 ಆಣೆ ಹೆಚ್ಚಾಗಿ ಕೊಡುತ್ತಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಎಸ್. ಕರಿಯಪ್ಪನವರು.—ಹಾಗಾದರೆ ಅವರು ನೀವು ಕೊಡುವುದಕ್ಕಿಂತ ಹೆಚ್ಚಾಗಿ ಅಂದರೆ ಟಿಕ ಒಂದಕ್ಕೆ 25 ರೂಪಾಯಿಗಳಂತೆ ಕೊಂಡು ತರುತ್ತಿದ್ದಾರೆಯೇ?

ಶ್ರೀ ಟಿ. ಮರಿಯಪ್ಪನವರು.—ಇರಬಹುದು.

ಶ್ರೀ ಎಸ್. ಕರಿಯಪ್ಪನವರು.—ಅವರು ನಿಮ್ಮ ಒಪ್ಪಂದದ ಪ್ರಕಾರ ಎಷ್ಟು ಸೌದೆಯನ್ನು ನಿಮಗೆ ಕೊಡಬೇಕಾಗಿದೆಯೋ ಅಷ್ಟನ್ನೂ ನಿಮಗೆ ಕೊಡದೆ ಇರುವಾಗ ಅವರು ಬೇರೆ ಯಾರಿಗಾದರೂ, ಹಾಗೆ ಸೌದೆಯನ್ನು ಸರಬರಾಯಿ ಮಾಡಲು ಅವಕಾಶ ವಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಅವರು ನಮಗೆ ತಿಂಗಳೊಂದಕ್ಕೆ ಒಂದು ಸಾವಿರ ಟಿಕ ಸೌದೆಯನ್ನು ಸರಬರಾಯಿ ಮಾಡಬೇಕೆಂದು ಒಪ್ಪಂದ ಮಾಡಿಕೊಳ್ಳಲಾಗಿದೆ. ಅದರ ಪ್ರಕಾರ ಅವರು ನಮಗೆ ಸರಬರಾಯಿ ಮಾಡುತ್ತಿದ್ದಾರೆ. ಇತರರೂ ಸಹ ಈ ಸ್ಥಳಕ್ಕೆ ಹಾಗೆ ಸೌದೆಯನ್ನು ತಂದು ಸರಬರಾಯಿ ಮಾಡಲು ಯಾವ ಪ್ರತಿಬಂಧಕವೂ ಇಲ್ಲ.

ಶ್ರೀ ಎಸ್. ಕರಿಯಪ್ಪನವರು.—ಅವರಿಗೆ ಈ ಸೌದೆಯ ಸರಬರಾಯಿಯನ್ನು ಕ್ರಮವಾಗಿ ನಡೆಸಿಕೊಂಡು ಬರಲು ಅವರಲ್ಲಿ ಸಾಕಷ್ಟು ಲಾರಿಗಳಿವೆಯೋ ಅಥವಾ ಅವರು ಬೇರೆಯವರ ಲಾರಿಗಳಲ್ಲಿ ತಂದು ಹಾಗೆ ಸರಬರಾಯಿ ಮಾಡುತ್ತಾರೋ?

ಶ್ರೀ ಟಿ. ಮರಿಯಪ್ಪನವರು.—ಅವರಲ್ಲಿ ಸಾಕಾದಷ್ಟು ಲಾರಿಗಳಿವೆಂದು ನನಗೆ ತಿಳಿದು ಬಂದಿದೆ.

ಮುಷೀರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆ—ಮುಸ್ಲಿಂ).—ಈಗ ತಮಗೆ ಸೌದೆಯನ್ನು ಸರಬರಾಯಿ ಮಾಡುತ್ತಿರುವ ಕಂಪೆನಿ ಯಾವುದು?

Sri T. MARIAPPA.—Messrs. The Mysore National Contractors and Suppliers Company.

ಜನಾಬ್ ಜೆ. ಮಹಮದ್ ಇಮಾಂರವರು.—ಇವರಲ್ಲದೆ ಮತ್ತೆ ಯಾರೂ ಚೆಂಡರನ್ನು ಕಳುಹಿಸಿರಲಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಬೆಂಗಳೂರು ಫ್ಯೂಯಲ್ ಟ್ರಾನ್ಸ್‌ಪೋರ್ಟ್ ಕಂಪೆನಿಯವರೂ ಕಳುಹಿಸಿದ್ದರು.

ಜನಾಬ್ ಜೆ. ಮಹಮದ್ ಇಮಾಂರವರು.—ಆ ಹೈಕಿಯಾರ ಕೊಜೇರ್ಷ ಕಡಿಮೆಯಿತ್ತು?

ಶ್ರೀ ಟಿ. ಮರಿಯಪ್ಪನವರು.—ಮೆಸರ್ಸ್ ದಿ ಮೈಸೂರು ನ್ಯಾಷನಲ್ ಕಂಟ್ರಾಕ್ಟರ್ಸ್ ಅಂಡ್ ಸಪ್ಲಯರ್ಸ್ ಕಂಪೆನಿಯವರದು ಹೆಚ್ಚು ಅನುಕೂಲವಾಗಿತ್ತು. ಆದ್ದರಿಂದ ಅವರ ಚೆಂಡರನ್ನು ಅಂಗೀಕರಿಸಲಾಯಿತು.

ಜನಾಬ್ ಜೆ. ಮಹಮದ್ ಇಮಾಂರವರು.—ಹಿಂದೆ ಇದ್ದವರ ಒಪ್ಪಂದವನ್ನು ಬಿಡಿಸಿ, ಈಗ ಹೊಸದಾಗಿ ಇವರಿಗೆ ಒಪ್ಪಂದ ಕೊಟ್ಟಿರುವುದರಲ್ಲಿ ಸರ್ಕಾರಕ್ಕೆ ಎಷ್ಟು ಹಣ ಲುಕ್ಸಾನಾಗುತ್ತಿದೆ?

ಶ್ರೀ ಟಿ. ಮರಿಯಪ್ಪನವರು.—ಏನೂ ಲುಕ್ಸಾನಾಗುವುದಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಈ ಇಬ್ಬರಲ್ಲದೆ ಮತ್ತೆ ಯಾರದೂ ಅರ್ಜಿಗಳು ಈ ಸಂಬಂಧವಾಗಿ ತಮಗೆ ಬಂದಿರಲಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಇನ್ನೂ ಕೆಲವರಿಂದ ಬಂದಿದ್ದವು. ಆದರೆ ಯಾರೊಬ್ಬರಿಗೂ ಇದರ ಜಹಗಿರಿ ಇರಬಾರದೆಂಬ ಉದ್ದೇಶದಿಂದ ಬದಲಾಯಿಸಲಾಯಿತು. ಅವರು ನಮಗೆ ತಿಂಗಳೊಂದಕ್ಕೆ 9,000 ಟಿಕ್ ಸೌದೆ ಒದಗಿಸಬೇಕಾಗಿದೆ. ಅದರಂತೆ ಒದಗಿಸುತ್ತಿದ್ದಾರೆ. ಇದಲ್ಲದೆ ಇತರರೂ ಸಹ ಬೇರೆ ಕಡೆಯಿಂದ ಸೌದೆಯನ್ನು ತಂದು ಇಲ್ಲಿ ವ್ಯಾಪಾರ ಮಾಡಬಹುದು. ಯಾವ ಅಡ ಚಣೆಯೂ ಇಲ್ಲ ಆದರೆ ಸಾರ್ವಜನಿಕರಿಗೆ ತೊಂದರೆ ಯಾಗದಿರಲೆಂಬ ಮುಂಜಾಗ್ರತೆಯ ಎಚ್ಚರಿಕೆಗಾಗಿ ನಾವು ಇವರಿಗೆ ಒಪ್ಪಂದವನ್ನು ಕೊಡಲಾಗಿದೆ.

ಜನಾಬ್ ಜೆ. ಮಹಮದ್ ಇಮಾಂರವರು.—ಈ ಕಂಪೆನಿಯಲ್ಲಿ ಎಷ್ಟು ಜನ ಸದಸ್ಯರಿದ್ದಾರೆ?

ಶ್ರೀ ಟಿ. ಮರಿಯಪ್ಪನವರು.—ಅದು ನನಗೆ ಗೊತ್ತಿಲ್ಲ.

ಜನಾಬ್ ಜೆ. ಮಹಮದ್ ಇಮಾಂರವರು.—ಕೋಲಾರದ ಶ್ರೀ ಎಕ್. ಸಿ. ತಿಮ್ಮಾರೆಡ್ಡಿಯವರು ಈ ಕಂಪೆನಿಯ ಸದಸ್ಯರಲ್ಲವೇ?

Sri T. MARIAPPA.—That question does not arise.

ಜನಾಬ್ ಜೆ. ಮಹಮದ್ ಇಮಾಂರವರು.—ಅವರೊಬ್ಬರು ಕಾಂಗ್ರೆಸ್ ಮೆಂಬರಲ್ಲವೇ? ಆದ್ದರಿಂದಲ್ಲವೇ ತಾವು ಆ ಕಂಪೆನಿಗೆ ಈ ಒಪ್ಪಂದವನ್ನು ಕೊಟ್ಟಿದ್ದು?

ಶ್ರೀ ಟಿ. ಮರಿಯಪ್ಪನವರು.—ಆ ಕಂಪೆನಿಯಲ್ಲಿ ಕಾಂಗ್ರೆಸ್ಸಿನವರಿದ್ದಾರೆಯೇ ಅಥವಾ ಬೇರೆಯವರಿದ್ದಾರೆಯೇ ಎಂಬ ವಿಚಾರಗಳನ್ನು ತಿಳಿಯಬೇಕಾದ ಅವಶ್ಯಕತೆ ಇರುವುದಿಲ್ಲ. ಅದರಲ್ಲಿ ಯಾರು ಬೇಕಾದರೂ ಇರಬಹುದು.

ಶ್ರೀ ಎಚ್ ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಈ ಕಂಪೆನಿಯವರು ರೈತರಿಗೆ ಟಿಕ್ ಒಂದಕ್ಕೆ ಎಷ್ಟು ದುಡ್ಡನ್ನು ಜಾಸ್ತಿಯಾಗಿ ಕೊಡುತ್ತಾರೆ?

ಶ್ರೀ ಟಿ. ಮರಿಯಪ್ಪನವರು.—ರೈತರಿಗೆ 8 ಆಣೆ ಜಾಸ್ತಿ ಕೊಡುತ್ತಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಹಾಗೆ ಅವರು ಆ ಪೊಬಲಗನ್ನು ಸರಿಯಾಗಿ ಪಾವತಿ ಮಾಡುತ್ತಿದ್ದಾರೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿಕೊಳ್ಳಲು ತಾವು ಯಾವುದಾದರೂ ಏಜನ್ಸಿಯನ್ನು ಇಟ್ಟಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ನಾವು ಒಬ್ಬ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ದರ್ಜೆಯವರನ್ನು ನೇಮಕ ಮಾಡಿದ್ದೇವೆ. ಅವರು ನಮಗೆ ಈ ಬಗ್ಗೆ ವರದಿಗಳನ್ನು ಕಳುಹಿಸಿಕೊಡುತ್ತಾರೆ.

Sri L. SIDDAPPA (Shimoga District—General).—Is it one of the terms of the tender notification that they should give anything more than what the previous Company was giving?

Sri T. MARIAPPA.—The tender notification is published in the Gazette. I should like to draw the attention of the Hon'ble Member to that notification.

Sri L. SIDDAPPA.—The Hon'ble Minister may be pleased to find out from the notification and give me that information.

Sri T. MARIAPPA.—Such a position is not tenable. When once it is published in the Gazette, the Hon'ble Member is expected to know it.

Sri L. SIDDAPPA.—He is in possession of the document just now. He can just oblige me, Sir.

Sri T. MARIAPPA.—Yes, I could oblige him. It is a big notification. If the Hon'ble Speaker were to permit me, I will read it.

Mr. SPEAKER.—The Hon'ble Minister may please pass it on to him.

Sri T. MARIAPPA.—Yes.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಇವರು ತಮ್ಮ ಒಪ್ಪಂದದ ಪ್ರಕಾರ ಸರಿಯಾಗಿ ಕೆಲಸವನ್ನು ನಡೆಸಿಕೊಂಡು ಬರುತ್ತಾರೆಂಬ ಬಗ್ಗೆ ಸಾಕಷ್ಟು ಸೆಕ್ಯುರಿಟಿಯನ್ನು ಏನಾದರೂ ಕೊಟ್ಟಿದ್ದಾರೆಯೇ?

ಶ್ರೀ ಟಿ. ಮರಿಯಪ್ಪನವರು.—40 ಸಾವಿರ ರೂಪಾಯಿನ ಸೆಕ್ಯುರಿಟಿ ಕೊಟ್ಟಿದ್ದಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಹಿಂದಿದ್ದ ಕಂಟ್ರಾಕ್ಟರು ಎಷ್ಟು ಸೆಕ್ಯುರಿಟಿಯನ್ನು ಕೊಟ್ಟಿದ್ದರು?

ಶ್ರೀ ಟಿ. ಮರಿಯಪ್ಪನವರು.—ಅವರೂ ಇಷ್ಟೇ ಕೊಟ್ಟಿದ್ದರು.

ಶ್ರೀ ಬಿ. ಎಂ. ಶಾಮಣ್ಣಗೌಡರು (ಬೆಂಗಳೂರು ರಿಟ್ರಾಸೀಡೆಡ್ ಪ್ರದೇಶ).—ಹಾಗೆ ಹಿಂದಿನ ಕಂಟ್ರಾಕ್ಟುದಾರರಿಂದ ತೆಗೆದುಕೊಂಡಿದ್ದ ಸೆಕ್ಯುರಿಟಿಯನ್ನು ವಾಪಸ್ಸು ಮಾಡಿದ್ದೀರಾ?

ಶ್ರೀ ಟಿ. ಮರಿಯಪ್ಪನವರು.—ಮಾಡಲಾಗಿದೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಇದನ್ನು ನಿರ್ವಾಹರದವರೇ ನಡೆಸುವುದಕ್ಕೆ ಆಗುತ್ತಿರಲಿಲ್ಲವೇ?

ಶ್ರೀ ಟಿ. ಮರಿಯಪ್ಪನವರು.—ಬೇರೆಯವರಿಗೆ ಕೊಡುವುದೇ ನೂಕ್ತವೆಂದು ತೋರಿ ಬಂತು.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅವರಿಗೆ ಈ ಬಗ್ಗೆ ನೀವು ಎಷ್ಟು ಪೆಟ್ರೋಲ್ ಕೊಡುತ್ತೀರಿ?

ಶ್ರೀ ಟಿ. ಮರಿಯಪ್ಪನವರು.—ಅವರಿಗೆ ನಾವು ಪೆಟ್ರೋಲ್ ಕೊಡುವುದಿಲ್ಲ. ಪೆಟ್ರೋಲ್ ಕೂಪನ್‌ಗಳನ್ನು ಕೊಡುತ್ತೇವೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಅವರಿಗೆ ಸೌದೆ ನರಬರಾಯಿಯ ಬಗ್ಗೆ ಪ್ಲಾಟೇಷನ್ ವಗೈರೆಗಳನ್ನೂ ನೀವೇ ಕೊಡುತ್ತೀರೋ?

ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಫಾರೆಸ್ಟ್ ಇಲಾಖೆಯವರಿಂದ ಹರಾಜಿನಲ್ಲಿ ಅವರೇ ಕೂಪನ್ನುಗಳನ್ನು ಕೊಂಡುಕೊಳ್ಳುತ್ತಾರೆ. ಅಲ್ಲದೆ ಖಾಸಗೀ ಜನಗಳಿಂದಲೂ ಕೊಂಡು ನಮಗೆ ನರಬರಾಯಿ ಮಾಡುತ್ತಾರೆ.

ಶ್ರೀ ಬಿ. ಎಂ. ಶಾಮಣ್ಣಗೌಡರು.—ಇದು ಜಾಯಿಂಟ್ ಸ್ಟಾಕ್ ಕಂಪೆನಿಯೋ ಅಥವಾ ಹೇಗೆ?

ಶ್ರೀ ಟಿ. ಮರಿಯಪ್ಪನವರು.—ಅದು ನನಗೆ ಗೊತ್ತಿಲ್ಲ.

Sri V. S. NARAYANA RAO (Bangalore City—General).—Is it a joint stock company?

Sri T. MARIAPPA.—I have no information on that point whether it is a joint stock company or purely partnership company.

Sri K. PUTTASWAMY (Mandya District—General).—Can the Hon'ble Minister kindly find out the rate quoted by the other Company?

Sri T. MARIAPPA.—32·8 for first class fire-wood and 24·2 for second class fuel.

Sri K. PUTTASWAMY.—What is the difference?

Sri T. MARIAPPA.—The rates are the same.

Sri K. PUTTASWAMY.—Have they given cash security or some other security?

Sri T. MARIAPPA.—They have given security which in equivalent of cash is equal to Rs. 40,000; they have pledged certain bonds.

ಶ್ರೀ ಎ. ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಟೆಗೆ ಎಂಟಾಣೆ ಜಾಸ್ತಿ ಕೊಡುತ್ತಾರೆಂದು ಹೇಳಿದಿರಿ. ಅದನ್ನು ಯಾವಾಗ ಕೇಗೆ ಕೊಡುತ್ತಾರೆ?

ಶ್ರೀ ಟಿ. ಮರಿಯಪ್ಪನವರು.—ಸೌದೆಯನ್ನು ತರುವಾಗಲೇ ಎಲ್ಲಿಂದ ತರುತ್ತಾರೋ ಅಲ್ಲಿ ಸಂಬಂಧಪಟ್ಟವರಿಗೆ ಕೊಡುತ್ತಾರೆ.

Appointment of Assistant Directors of Agriculture

*Q—32. **Sri G. VEERAPPA** (Chitaldrug District—General).—

Will the Government be pleased to state.—

(a) whether applications were called for, for the appointment of Assistant Directors of Agriculture and if so, when; and for how many places;

(b) the number of candidates interviewed and where;

(c) whether they have passed orders making the selection; if not, the reason for the delay?

*A.—**Sri T. MARIAPPA** (Home Minister).—

(a) Yes; 19-4-1949, for six posts.

(b) 141; in the Office of the Director of Agriculture.

(c) No. The matter is under consideration of Government.

ಶ್ರೀ ಜಿ. ವೀರಪ್ಪನವರು.—ಅಸಿಸ್ಟೆಂಟ್ ಅಗ್ರಿಕಲ್ಚರಲ್ ಡೈರೆಕ್ಟರ ಹುದ್ದೆಗಾಗಿ ಬಂದ ಉಮೇದುವಾರರನ್ನು ಇಂಟರ್‌ವ್ಯೂ ಮಾಡಿದ್ದು ಯಾವಾಗ?

Sri T. MARIAPPA.—I want notice for the exact date. It is a few months back.

ಶ್ರೀ ಜಿ. ವೀರಪ್ಪನವರು.—ಇಷ್ಟು ದಿವಸವಾದರೂ ಸರ್ಕಾರದವರು ಉಮೇದುವಾರರನ್ನು ಚುನಾಯಿಸಿ ಅಖೈರಾಗಿ ಆರ್ಡರು ಮಾಡದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಮರಿಯಪ್ಪನವರು.—ಚುನಾವಣೆ ಆಗಿದೆ.

ಶ್ರೀ ಜಿ. ವೀರಪ್ಪನವರು.—ಆಮೇಲೆ ಇಲಾಖೆಯಲ್ಲಿರುವ ಸರ್ವಿಸ್ ಆದ ಸೀನಿಯರ್ ಇಕ್ಸ್‌ಪೆಕ್ಟರುಗಳಲ್ಲಿ ಕೆಲವರನ್ನು ಆ ಹುದ್ದೆಗೆ ಏರಿಸಬೇಕೆಂಬುದು ಆಲೋಚನೆಯಲ್ಲಿದೆಯೇ?

ಶ್ರೀ ಟಿ. ಮರಿಯಪ್ಪನವರು.—ಹೊಸಬರು ಸರಿಯಾಗಿ ತರಪೇತುಹೊಂದಿ ಆ ಕೆಲಸಕ್ಕೆ ನೇಮಕಮಾಡಲ್ಪಡುವವರೆಗೂ ಸೀನಿಯರ್ ಅಗ್ರಿಕಲ್ಚರರ್ ಇಕ್ಸ್‌ಪೆಕ್ಟರುಗಳನ್ನು ಹಂಗಾಮಿಯಾಗಿ ತೆಗೆದುಕೊಳ್ಳಬೇಕೆಂದು ಪರಿಶೀಲನೆಯಲ್ಲಿದೆ.

ಶ್ರೀ ಜಿ. ವೀರಪ್ಪನವರು.—ಎಷ್ಟು ಜನರನ್ನು ತೆಗೆದುಕೊಳ್ಳಬೇಕೆಂದಿದ್ದೀರಿ?

ಶ್ರೀ ಟಿ. ಮರಿಯಪ್ಪನವರು.—ಈಗ ಆರು ಜಾಗ ಖಾಲಿ ಇದೆ. ಮುಂದೆ ಇನ್ನೂ ಕೆಲವು ಸ್ಥಾನಗಳು ದೊರಕುವ ಸಂಭವವಿದೆ. ಆ ಜಾಗಗಳಿಗೆ ತರಪೇತಾದವರು ಬರುವವರೆಗೆ ಇಲಾಖೆಯಲ್ಲಿರುವ ಸೀನಿಯರ್ ಇಕ್ಸ್‌ಪೆಕ್ಟರುಗಳನ್ನು ಅವರ ಯೋಗ್ಯತೆ, ದಕ್ಷತೆ ವಗೈರೆ ನೋಡಿಕೊಂಡು ಹಂಗಾಮಿಯಾಗಿ ತಾಕಬೇಕೆಂಬ ವಿಷಯವು ಪರಿಶೀಲನೆಯಲ್ಲಿದೆ.

Sri G. VEERAPPA.—Is preference given to the graduates of our Agricultural College?

Sri T. MARIAPPA.—Certainly. Graduates of our Agricultural College are always preferred.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಚುನಾವಣೆ ಆಗಿದೆಯೆಂದು ಹೇಳಿದಿರಿ. ಆದರೆ (c) ಪ್ರಶ್ನೆಯಲ್ಲಿ 'whether they have passed orders making the selection; if not, the reason for the delay' ಎಂದು ಕೇಳಿರುವುದಕ್ಕೆ 'No. The matter is under consideration of 'Government' ಎಂದು ಉತ್ತರ ಹೇಳಿದೆ. ಆದ್ದರಿಂದ ಹೇಗೆ ಆಯಿತು?

ಶ್ರೀ ಟಿ. ಮರಿಯಪ್ಪನವರು.—Exactly. ಪ್ರಶ್ನೋತ್ತರಗಳು ಮುದ್ರಣಕ್ಕೆ ಹೋದಮೇಲೆ ಚುನಾವಣೆಯಾಯಿತು.

Janab MOHAMED VALIULLA (Kolar-Muslim).—Who are the members selected?

Sri T. MARIAPPA.—Government Order will issue very shortly. I am not prepared to disclose anything at this stage.

Sri L. SIDDAPPA (Shimoga District—General).—Is it still in the confidential stage?

Sri T. MARIAPPA.—Yes.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಇಂಟರ್‌ವ್ಯೂ ಆಗಿ ಒಂದು ವರ್ಷ ನಾಲ್ಕು ತಿಂಗಳಾದ ಮೇಲೆ ಚುನಾಯಿಸಿದಿರೊ?

ಶ್ರೀ ಟಿ. ಮರಿಯಪ್ಪನವರು.—ಒಂದು ವರ್ಷ ಆಗಿಲ್ಲ; ಕೆಲವು ತಿಂಗಳಮೇಲೆ.